ಕರ್ನಾಟಕ ಸರ್ಕಾರ
(ಪಿ.ಆರ್.ಪಿ.67)

ಹೇಳಿಕೆ ಹಾಳೆ
(ಆರ್.ಪಿ.ಸಂಖ್ಯೆ 57)
ನಮೂನೆ ಸಂಖ್ಯೆ 4

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ ಸ್ಪೆಷಲ್ ನ್ಯಾಯಾಧೀಶರ ನ್ಯಾಯಾಲಯ, ಹಾಸನ**
**ಸ್ಪೆಷಲ್ ಕೇಸ್ ನಂಬರ್ : 140/2015**

**ಫ್ರಾಸಾ- 27 ಚಾಸಾ- 40**

| | | |
|---|---|---|
| ಸಾಕ್ಷಿದಾರರ ಹೆಸರುಃ | : | ಎನ್ ಸಿ ಶಿವಮಾದಯ್ಯ |
| ತಂದೆಯ ಹೆಸರುಃ | : | ಚಿಕ್ಕ ಶಿವನೇಗೌಡ |
| ವಯಸ್ಸುಃ | : | 63 ವರ್ಷ |
| ಉದ್ಯೋಗಃ | : | ನಿವೃತ್ತ ತೆರಿಗೆ ಉಪ ಆಯುಕ್ತ |
| ವಾಸ | : | ಬೆಂಗಳೂರು |

**ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಿದ ದಿನಾಂಕ: 17-04-2025:**

**ಮುಖ್ಯ ವಿಚಾರಣೆಃ ಸರ್ಕಾರದ ಪರವಾಗಿ ಮಾನ್ಯ ವಿಶೇಷ ಅಭಿಯೋಜಕರಿಂದಃ**

ನಾನು ಹಾಸನ ವಾಣಿಜ್ಯ ತೆರಿಗೆ ಸಹಾಯಕ ಆಯುಕ್ತರ ಕಛೇರಿಯಲ್ಲಿ 2013 ರಿಂದ 2016 ರವರೆಗೆ ಸಹಾಯಕ ಆಯುಕ್ತನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2.ದಿಃ20-6-2014ರಂದು ಹಾಸನ ಲೋಕಾಯುಕ್ತ ಪೊಲೀಸ್ ಠಾಣೆಯಿಂದ ಟಿನ್ ನಂಬರ್ 29100246725 ಕ್ಕೆ ಸಂಬಂಧಿಸಿದಂತೆ ಕರ್ನಾಟಕ ಮೌಲ್ಯವರ್ಧಿತ ತೆರಿಗೆ ನೋಂದಣಿ ಪ್ರಮಾಣಪತ್ರದ ದೃಢೀಕೃತ ಪ್ರತಿ ಮತ್ತು ಪ್ರಾರಂಭದಿಂದ ದಿಃ25-7-2013ರವರೆಗೆ ಪಾವತಿ ಮಾಡಿರುವ ತೆರಿಗೆ ವಿವರಗಳನ್ನು ಪೂರಕ ದಾಖಲಾತಿಗಳೊಂದಿಗೆ ನೀಡುವಂತೆ ಕೋರಿದ್ದರು. ಅದರಂತೆ ನಮ್ಮ ಕಛೇರಿಯ ಲಭ್ಯ ದಾಖಲೆಗಳನ್ನು ಪರಿಶೀಲಿಸಿದಾಗ ಸದರಿ ಟಿನ್ ನಂಬರ್ ಶ್ರೀಮತಿ ಹೆಚ್ ಜಿ ಪದ್ಮಾವತಿ, ಮೆಸಸ್ ಗಣಪತಿ ಎಂಟರ್ ಪ್ರೈಸಸ್ ಶಾಂತಿಗ್ರಾಮ, ಹಾಸನ ತಾಲ್ಲೂಕು ಇವರ ಹೆಸರಿನಲ್ಲಿ ನೋಂದಣಿಯಾಗಿರುವುದು ಕಂಡುಬಂತು. ಸದರಿಯವರು

ದಿಃ27-10-2003ರಲ್ಲಿ ಕರ್ನಾಟಕ ಮಾರಾಟ ತೆರಿಗೆ ಅಡಿಯಲ್ಲಿ ನೋಂದಣಿಯನ್ನು ಪಡೆದಿರುತ್ತಾರೆ ಎನ್ನುವುದು ಕಂಡುಬಂತು. ತದನಂತರ ದಿಃ1-4-2005ರಿಂದ ಕರ್ನಾಟಕ ಮೌಲ್ಯವರ್ಧಿತ ತೆರಿಗೆ ಕಾಯಿದೆ ಜಾರಿಯಾದ ಕಾರಣ ಅವರಿಗೆ ಕರ್ನಾಟಕ ಮಾರಾಟ ತರಿಗೆ ಸಂಖ್ಯೆ ಆಧಾರದಲ್ಲಿ ಮೇಲೆ ಹೇಳಿದ ಟಿನ್ ನಂಬರನ್ನು ನೀಡಿರುತ್ತೇವೆ. ಸದರಿಯವರು ಇಲಾಖೆಗೆ ಪಾವತಿಸಿದ ತೆರಿಗೆ ವಿವರಗಳನ್ನು ಇಲಾಖೆಯ ಇತಂತ್ರಾಂಶದಲ್ಲಿ ಪರಿಶೀಲಿಸಿದಾಗ 2006-2007ರಿಂದ ಜುಲೈ 2013ರವರೆಗೆ ಮಾಸಿಕ ವಿವರಗಳನ್ನು ಸಲ್ಲಿಸಿದ್ದು ಅದರಲ್ಲಿ ಶೂನ್ಯ ವಹಿವಾಟು ಘೋಷಿಸಿಕೊಂಡಿರುತ್ತಾರೆ. ಮುಂದುವರೆದು ಸದರಿಯವರು ದಿಃ4-12-2010ರಂದು ರೂ.26,622ತೆರಿಗೆಯನ್ನು ಮತ್ತು ದಿಃ26-4-2007ರಂದು ರೂ.1000ವೃತ್ತಿತೆರಿಗೆ ಬಾಪ್ತು ಪಾವತಿಸಿರುತ್ತಾರೆ, ಇದನ್ನು ಬಿಟ್ಟು ಬೇರೇನೂ ತೆರಿಗೆ ಪಾವತಿಸಿಲ್ಲ ಎನ್ನುವುದು ಕಂಡುಬಂತು. ಈಎಲ್ಲಾ ವಿಚಾರವನ್ನು ನಮೂದಿಸಿ ದಿಃ7-7-14ರ ಪತ್ರದೊಂದಿಗೆ ಸಂಬಂಧಿಸಿದ ದಾಖಲೆಗಳನ್ನು ಲೋಕಾಯುಕ್ತ ಪೊಲೀಸ ಠಾಣೆಗೆ ಕಳುಹಿಸಿಕೊಟ್ಟಿರುತ್ತೇನೆ.

3.ಪೊಲೀಸ್ ನಿರೀಕ್ಷಕರು ಮಾಹಿತಿ ಕೋರಿ ನೀಡಿದ ಪತ್ರವನ್ನು ಈಗ ನೋಡುತ್ತಿದ್ದು ಅದನ್ನು ನಿಪಿ-143ಎಂದು ದಿಃ7-7-2014ರಂದು ನಾನು ಮಾಹಿತಿ ನೀಡಿದ ಪತ್ರವನ್ನು ಈಗ ನೋಡುತ್ತಿದ್ದು ಅದನ್ನು ನಿಪಿ-144 ಎಂದು ಗುರುತಿಸಲಾಯಿತು. ಅದರೊಂದಿಗೆ ಕಳುಹಿಸಿದ ದಾಖಲೆಗಳನ್ನು ಈಗ ನೋಡುತ್ತಿದ್ದು ಅವೆಲ್ಲವನ್ನು ದೃಢೀಕರಿಸಿ ನೀಡಿರುತ್ತೇನೆ. ಅದು ಒಟ್ಟು 19ಹಾಳೆಗಳನ್ನೊಳಗೊಂಡಿದ್ದು ಅವುಗಳನ್ನು ಒಟ್ಟಾಗಿ ನಿಪಿ-145 ಎಂದು ಗುರುತಿಸಲಾಯಿತು. ನಿಪಿ-144ರಲ್ಲಿ ನನ್ನ ರುಜು ಇದ್ದು ಅದನ್ನು ನಿಪಿ-144(ಎ) ಎಂದು ಗುರುತಿಸಲಾಯಿತು. ನಿಪಿ-145ರ ಎಲ್ಲಾ ದಾಖಲೆಗಳಲ್ಲಿ ನಾನುದೃಢೀಕರಿಸಿ ಸಹಿ ಹಾಕಿರುತ್ತೇನೆ. ಸಾಕ್ಷಿಯು ಗುರುತಿಸಿದ ಸಹಿಗಳನ್ನು ಒಟ್ಟಾಗಿ ನಿಪಿ-145(ಎ)ಎಂದು ಗುರುತಿಸಲಾಯಿತು.

**<u>ಪಾಟೀಸವಾಲುಃ ಆರೋಪಿ ಪರ ವಕೀಲರಿಂದಃ</u>**

ಇಲ್ಲವೆಂದು ಹೇಳಿರುತ್ತಾರೆ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ.ಸ.ಇದೆ.**

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ ಸ್ಪೆಷಲ್**

**ನ್ಯಾಯಾಧೀಶರು, ಹಾಸನ.**